ಈ) ವಿವರಗಳನ್ನು ನೀಡುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 2000-2001ನೇ ಸಾಲಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕೆರೆಯ ಹೊಳೆತ್ತುವ ಕಾರ್ಯ ಕೈಗೊಂಡಿರುವುದಿಲ್ಲ.

ಆ), ಇ) ಮತ್ತು ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಆಡಳಿತಾತ್ಮಕ ನ್ಯಾಯಮಂಡಳಿಗೆ ವಹಿಸಿರುವ ಗೃಹ ಇಲಾಖೆ ಪ್ರಕರಣಗಳು

5050 - ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ಇಲಾಖೆಗೆ ಸಂಬಂಧಪಟ್ಟ ಆಡಳಿತ ನ್ಯಾಯ ಮಂಡಳಿಗೆ ವಹಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಆ) ಈ ಬಗ್ಗೆ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ಇವುಗಳ ಕುರಿತಾಗಿ ಎಷ್ಟು ಪ್ರಕರಣಗಳನ್ನು ನಿಕಾಲ್ ಮಾಡಲಾಗಿದೆ?

ಈ) ನ್ಯಾಯ ಮಂಡಳಿ ನೀಡಿರುವ ಸಲಹೆ ಮತ್ತು ಸೂಚನೆಗಳೇನು?

ಉ) ಇದನ್ನು ಜಾರಿಗೆ ತರಲು ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಯಾವ ಪ್ರಕರಣವನ್ನೂ ವಹಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

5051 - ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ಪ್ರಸ್ತುತ ವರ್ಷ ಸರ್ಕಾರ ಕೈಗೊಂಡ ಕ್ರಮಗಳಾವುವು?

ಅ) *ರೋಣದಲ್ಲಿ110 ಕೆ.ವಿ. ವಿದ್ಯುತ್ ಘಟಕಕ್ಕೆ ಸರ್ಕಾರ ಅನುಮತಿಸಿದೆ? ಇದು ಎಂದಿನಿಂದ ಕಾರ್ಯಾರಂಭ ಮಾಡುವುದು?*

ಇ) *ರೈತರ ಪಂಪ್‌ಸೆಟ್ ವಿದ್ಯುತ್ ಬಿಲ್ ಮೇಲಿನ ಬಡ್ಡಿ ಸಂಪೂರ್ಣ ಮನ್ನಾ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ಸರ್ಕಾರವು ರಾಜ್ಯದ ಅನೇಕ ಸ್ಥಳಗಳಲ್ಲಿ ಖಾಸಗಿ ಕ್ಷೇತ್ರದಲ್ಲಿ ಎಂ.ಓ.ಯು. ಹಾಗೂ ಬಿಡ್ ರೂಟ್‌ಗಳ ಮುಖಾಂತರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಅನುಮತಿ ನೀಡಿದ್ದು, ಅವುಗಳ ಪೈಕಿ ಪ್ರಸಕ್ತ ವರ್ಷ ಮೆ: ರಾಯಲ್‌ಸೀಮಾ ಆಲ್ಕಲೀಸ್ ಅಂಡ್ ಅಲೈಡ್ ಕೆಮಿಕಲ್ಸ್ ಲಿಮಿಟೆಡ್ ಕಂಪನಿಯು 27.8 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಘಟಕವನ್ನು ಸ್ಥಾಪಿಸಿ ಈಗಾಗಲೇ ಕಾರ್ಯಾರಂಭಗೊಳಿಸಿದೆ.

ಅಲ್ಲದೆ ಈ ಕೆಳಕಂಡ ಖಾಸಗೀ ಕ್ಷೇತ್ರದ ವಿದ್ಯುತ್ ಘಟಕಗಳು ಮುಂದಿನ ವರ್ಷದ ಮೊದಲ ಭಾಗದಲ್ಲಿ ಪ್ರಾರಂಭವಾಗುವ ನಿರೀಕ್ಷೆ ಇದೆ.

ಕ್ರಮ ಸಂಖ್ಯೆ	ವಿದ್ಯುತ್ ಉತ್ಪಾದನಾ ಘಟಕದ ಹೆಸರು	ಒಟ್ಟು ಸಾಮರ್ಥ್ಯ (ಮೆ. ವ್ಯಾಟ್‌ಗಳಲ್ಲಿ)
1.	ಮೆ. ತಣ್ಣೀರ್ ಭಾವಿ ಪವರ್ ಕಂಪನಿ (ಪ್ರೈ) ಲಿಮಿಟೆಡ್ (ಬಾರ್ಜ್ ಮೌಂಟೆಡ್ ಪ್ರಾಜೆಕ್ಟ್), ಮಂಗಳೂರು	220
2.	ಮೆ. ಟಾಟಾ ಎಲೆಕ್ಟ್ರಿಕ್ ಕಂಪನಿ (ಡೀಸೆಲ್ ಆಧಾರಿತ ವಿದ್ಯುತ್ ಯೋಜನೆ), ಬೆಳಗಾಂ	81.30
	ಒಟ್ಟು	**301.30**

ಇವುಗಳಲ್ಲದೆ, ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದಲ್ಲಿನ ಕೈಗಾ ಅಣು ವಿದ್ಯುತ್ ಸ್ಥಾವರದ 220 ಮೆಗಾವ್ಯಾಟ್ ಸಾಮರ್ಥ್ಯದ ಒಂದನೇ ಘಟಕ ಅಕ್ಟೋಬರ್ 2000ದಲ್ಲಿ ಕಾರ್ಯಾರಂಭ ಮಾಡಿದೆ. ಇದರಲ್ಲಿ ಕರ್ನಾಟಕದ ಪಾಲು 50 ಮೆಗಾ ವ್ಯಾಟ್‌ರಷ್ಟಿರುವುದು.

ಆ) ರೋಣದಲ್ಲಿ 110 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆಗೆ ಬೇಕಾಗಿರುವ ಸೂಕ್ತವಾದ ಭೂಮಿಯನ್ನು ಗುರುತಿಸಲಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆಯ ಜಾರಿಯಲ್ಲಿರುತ್ತದೆ. ಭೂಮಿಯನ್ನು ವಶಪಡಿಸಿಕೊಂಡ ನಂತರ, "ಟರ್ನ್ ಕೀ" ಆಧಾರದ ಮೇಲೆ ಈ ಕಾಮಗಾರಿಯನ್ನು ಕೈಗೊಳ್ಳಲು ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು.

ಇ) ರೈತರು ದಿನಾಂಕ 30.11.2000ದ ಒಳಗೆ ನಿಗಮದ ಆದೇಶದಂತೆ ಒಂದು ಬಾರಿ ಬಡ್ಡಿ ಮನ್ನಾ ಯೋಜನೆ 2000 ಎಂಬ ನೂತನ ಯೋಜನೆಯಡಿಯಲ್ಲಿ ಬಾಕಿಯಿರುವ ಅಸಲನ್ನು ಸಂಪೂರ್ಣವಾಗಿ ಪಾವತಿ ಮಾಡಿದರೆ ಬಡ್ಡಿಯನ್ನು ಪೂರ್ಣವಾಗಿ ಮನ್ನಾ ಮಾಡಲಾಗುವುದು.